# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 722
2. ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ
3. ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
4. ಉತ್ತರಿಸುವ ದಿನಾಂಕ : 15-12-2020

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೊಡಗು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ಒಟ್ಟು ಎಷ್ಟು ಎಕರೆ ಜಮೀನು ಹೊಂದಿದೆ: | ಕೊಡಗು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ವಿಸ್ತೀರ್ಣವು ಒಟ್ಟು 463 ಎಕರೆ 07 ಸೆಂಟ್ಸ್ ಜಮೀನು ಇರುತ್ತದೆ.<br>Kodagu district has a total area of 463 acres 07 cents of Farms and Nurseries land under Department of Horticulture. |
| ಆ | ಸದರಿ ಜಮೀನಿನಲ್ಲಿ ಎಷ್ಟು ಎಕರೆ ಜಮೀನು ಯಾವುದೇ ಬೆಳೆ ಬೆಳೆಯದೆ ಪಾಳು ಬಿದ್ದಿದೆ: | ಸದರಿ ಜಮೀನಿನಲ್ಲಿ 212 ಎಕರೆ 96 ಸೆಂಟ್ಸ್ ಜಮೀನಿನಲ್ಲಿ ತೋಟಗಾರಿಕೆ ಬೆಳೆ ಬೆಳೆದಿರುವುದಿಲ್ಲ. ಕಾರಣಗಳನ್ನು ಉಪ ಪ್ರಶ್ನೆ (ಇ)ರಲ್ಲಿ ವಿವರಿಸಲಾಗಿದೆ.<br>Horticulture crops are not grown in 212 acres 96 cents of land. Reason have been given in sub question(ಇ). |
| ಇ | ಅದರಲ್ಲಿ ಬೆಳೆ ಬೆಳೆಯದಿರಲು ಕಾರಣಗಳೇನು: | ತೋಟಗಾರಿಕೆ ಬೆಳೆ ಬೆಳೆಯದೆ ಇರುವ ಒಟ್ಟು 212 ಎಕರೆ 96 ಸೆಂಟ್ಸ್ ಪ್ರದೇಶದಲ್ಲಿ<br>• ಮಾದಲಾಪುರ ತೋಟಗಾರಿಕೆ ಕ್ಷೇತ್ರದ 82 ಎಕರೆ 50 ಸೆಂಟ್ಸ್ ಮೀಸಲು ಅರಣ್ಯ ಪ್ರದೇಶವಾಗಿರುವುದರಿಂದ ಇಲ್ಲಿ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲಾಗಿರುವುದಿಲ್ಲ.<br>• ನಾಪೋಕ್ಲು ತೋಟಗಾರಿಕೆ ಕ್ಷೇತ್ರದ 17 ಎಕರೆ 10 ಸೆಂಟ್ಸ್ ವಿಸ್ತೀರ್ಣವು ಕಾವೇರಿ ನದಿ ಪಾತ್ರವಾಗಿದ್ದು, ಪ್ರತಿ ವರ್ಷ ನೀರಿನಿಂದ ಜಲಾವೃತಗೊಳ್ಳುವುದರಿಂದ ಇಲ್ಲಿ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ. |

| | | |
|---|---|---|
| | | • ಹಾರಂಗಿ ಮತ್ತು ಮಾದಾಪುರ ತೋಟಗಾರಿಕೆ ಕ್ಷೇತ್ರದ 123 ಎಕರೆ 36 ಸೆಂಟ್ಸ್ ಪ್ರದೇಶದಲ್ಲಿ ಕಾಳಮೆಣಸು, ಸಪೋಟ, ಬೆಣ್ಣೆಹಣ್ಣು, ಕೋಕಂ ಹಾಗೂ ಇತರೆ ಬೆಳೆಗಳ ಪ್ರದೇಶ ವಿಸ್ತರಣೆ ಕೈಗೊಳ್ಳಲು ಕ್ರಮವಹಿಸಲಾಗಿದೆ.<br>• Out of 212 acres 96 cents of land which is not developed with Horticulture crops.<br>• 82 acres 50 cents in Madalapura Horticulture farm is under Reserved Forest Land. Hence this land could not be developed.<br>• 17 acres 10 cents of land in Napoklu is in Kaveri river basin which is water logged. Hence this area could not be developed.<br>• Action has been taken to grow Black papper, Sapota, Butter fruit, Kokum and other crops in the remaining 123 acres 36 cents of land in Harangi and Madapura Horticulture farm. |
| ಈ | ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಯಾವುದಾದರು ಜಮೀನು ಒತ್ತುವರಿಯಾಗಿದೆಯೇ, ಹಾಗಿದ್ದಲ್ಲಿ ಇದುವರೆಗೂ ತೆರವು ಕಾರ್ಯಾಚರಣೆಯನ್ನು ಏಕೆ ಕೈಗೊಂಡಿಲ್ಲ? | ಹೌದು,<br>ಮಾದಾಪುರ ತೋಟಗಾರಿಕೆ ಕ್ಷೇತ್ರದ ಸರ್ವೆ ನಂ.33/1ರಲ್ಲಿ 3ಎಕರೆ 14 ಸೆಂಟ್ಸ್ ಜಮೀನು ಒತ್ತುವರಿಗೆ ಸಂಬಂಧಿಸಿದಂತೆ ಸಿವಿಲ್ ಜಡ್ಜ್ (Junior Division) ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಸೋಮವಾರಪೇಟೆ ಇಲ್ಲಿ O.S.No.70/18 ಪ್ರಕರಣವು ದಿನಾಂಕ:11-12-2018 ರಂದು ದಾಖಲಾಗಿದ್ದು, ಸದರಿ ಪ್ರಕರಣವು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ, ಬೆಂಗಳೂರು ಇಲ್ಲಿಗೆ ದಿನಾಂಕ:19-06-2019 ರಂದು LGC(T), 689/19 ಆಗಿ ವರ್ಗಾವಣೆಗೊಂಡಿರುತ್ತದೆ. ಸದರಿ ಪ್ರಕರಣವು ವಿಚಾರಣೆಯ ಹಂತದಲ್ಲಿರುತ್ತದೆ. ಇದೇ ಕ್ಷೇತ್ರದ ಒತ್ತುವರಿಗೆ ಸಂಬಂಧಿಸಿದಂತೆ ಸಿವಿಲ್ ಜಡ್ಜ್ ( Junior Division) ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಸೋಮವಾರಪೇಟೆ ಇಲ್ಲಿ O.S. No.64/19 ದಾಖಲಾಗಿದ್ದು, ಸದರಿ ಪ್ರಕರಣವು ವಿಚಾರಣೆ ಸಲುವಾಗಿ ಬಾಕಿ ಇರುತ್ತದೆ.<br>ಜಮೀನು ವಿವಾದದ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಬಾಕಿ ಇರುವ ಕಾರಣ ತೆರವು ಕಾರ್ಯಾಚರಣೆಯನ್ನು ಕೈಗೊಂಡಿರುವುದಿಲ್ಲ. |

| | | |
|---|---|---|
| | | Yes,<br>Regarding the Encroachment in Madapura Horticulture Farm Survey No.33/1, O.S.No.70/18. dated:11-12-2018 has been registered for 3 acres 14 cents in Civil Judge (Junior Division) and JMFC. Court, Somavarpet. This case has been transferred to Karnataka Land Grabbing Prohibition Special Court, Bangalore as LGC(T). 689/19, dated:19-16-2019 the case is pending for enquiry. Another case O.S. No.64/19 is registered in Civil Judge (Junior Division) and J.M.F.C Court, Somavarpet.<br>As this cases are pending for enquiry in the court clearance operation has not been taken in this land. |

ಸಂ: HORTI/514/HGM/2020-admn-Horti-Sec

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ

ಮತ್ತು ರೇಷ್ಮೆ ಸಚಿವರು